**ಮೆ. ಏಷ್ಯನ್ ಪಾಲಿಮರ್ಸ್ ಇವರು ಪ್ಲಾಟ್ ಸಂಖ್ಯೆ : 64–ಬಿ ಮತ್ತು 65–ಸಿ, ಕೆಐಎಡಿಬಿ ಕೈಗಾರಿಕ ಪ್ರದೇಶ ತೂಬಿನಕೆರೆ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಹಾಲಿ ಉತ್ಪಾದಿಸುತ್ತಿರುವ ಸಿಂಥೇಟಿಕ್ ರೆಸಿನ್ ಉತ್ಪನ್ನಗಳ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಎರಡು ವಿಧಧ ಹೊಸ ಸಿಂಥೇಟಿಕ್ ರೆಸಿನ್‌ನ್ನು ಉತ್ಪಾಧಿಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ದಿನಾಂಕ 22–01–2020 ರಂದು ಪೂರ್ವಾಹ್ನ 11.00 ಗಂಟೆಗೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡವಳಿಗಳು.**

| | | |
|---|---|---|
| **ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ** | | ಮೆ. ಏಷ್ಯನ್ ಪಾಲಿಮರ್ಸ್, ಪ್ಲಾಟ್ ಸಂಖ್ಯೆ. 64–ಬಿ ಮತ್ತು 65– ಸಿ, ಕೆಐಎಡಿಬಿ ಕೈಗಾರಿಕ ಪ್ರದೇಶ, ತೂಬಿನಕೆರೆ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ. |
| **ಹಾಜರಿದ್ದ ಪರಿಸರ ಸಾರ್ವಜನಿಕ ಆಲಿಕಾ ಸಮಿತಿಯ ಸದಸ್ಯರುಗಳ ವಿವರ** | | **ಪದನಾಮ** |
| 1. | ಡಾ// ಎಂ.ವಿ. ವೆಂಕಟೇಶ್, ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ | ಅಧ್ಯಕ್ಷರು |
| 2 | ಡಾ// ಪಿ. ನಿರಂಜನ್, ಹಿರಿಯ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ವಲಯ ಕಛೇರಿ, ಮೈಸೂರು. | ಸದಸ್ಯರು |
| 3. | ಶ್ರೀಮತಿ. ಕೆ.ಎಲ್. ಸವಿತ, ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪ್ರಾದೇಶಿಕ ಕಛೇರಿ, ಮಂಡ್ಯ. | ಸದಸ್ಯ ಸಮಾವೇಷಕರು |
| **ಹಾಜರಿದ್ದ ಇತರ ಅಧಿಕಾರಿಗಳ ವಿವರ** | | |
| 1 | ಶ್ರೀಮತಿ. ಬಿ.ಕೆ. ಅಶ್ವಿನಿ, ಉಪ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪ್ರಾದೇಶಿಕ ಕಛೇರಿ, ಮಂಡ್ಯ. | |
| **ಮೆ. ಏಷ್ಯನ್ ಪಾಲಿಮರ್ಸ್ ಉದ್ದಿಮೆಯ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು** | | |
| 1. | ಶ್ರೀ ಟಾಮ್ ಮ್ಯಾಥಿವ್, ಮಾಲೀಕರು ಮೆ. ಏಷ್ಯನ್ ಪಾಲಿಮರ್ಸ್ | |
| 2. | ಶ್ರೀ. ಕೆ.ಎಮ್. ಲಿಂಗರಾಜು, ಯೋಜನಾ ಸಲಹೆಗಾರರು, ಮೆ. ಸಂರಕ್ಷಣಾ, ಬೆಂಗಳೂರು | |
| **ಹಾಜರಿದ್ದ ಅಧಿಕಾರಿಗಳ ಮತ್ತು ಸಾರ್ವಜನಿಕರ ವಿವರವನ್ನು ಅನುಬಂಧ–1 & 2 ರಲ್ಲಿ ಲಗತ್ತಿಸಲಾಗಿದೆ.** | | |

**ಪೀಠಿಕೆ:**

ಮೆ. ಏಷ್ಯನ್ ಪಾಲಿಮರ್ಸ್ ಇವರು ಪ್ಲಾಟ್ ಸಂಖ್ಯೆ : 64–ಬಿ ಮತ್ತು 65– ಸಿ, ಕೆಐಎಡಿಬಿ ಕೈಗಾರಿಕ ಪ್ರದೇಶ ತೂಬಿನಕೆರೆ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಹಾಲಿ ಉತ್ಪಾಧಿಸುತ್ತಿರುವ ಸಿಂಥೇಟಿಕ್ ರೆಸಿನ್ ಉತ್ಪನ್ನಗಳ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಎರಡು ವಿಧಧ ಹೊಸ ಸಿಂಥೇಟಿಕ್ ರೆಸಿನ್‌ನ್ನು ಉತ್ಪಾಧಿಸಲು ಉದ್ದೇಶಿಸಿದ್ದು, ಇವರುಗಳ ವಿವರ ಈ ಕೆಳಕಂಡಂತಿರುತ್ತದೆ.

| Sl. No. | Synthetic resins | Production capacity in Tones/Annum | |
|---|---|---|---|
| | | Eixsting | Proposed |
| 1 | Phenol formaldehyde liquid resin (50%) | 900 | 7200 |
| 2 | Phenol formaldehyde liquid resin (73%) | 12 | 2100 |
| 3 | Phenol formaldehyde liquid resin (80%) | 1150 | 2100 |
| 4 | Phenol formaldehyde Powder resin | 36 | 900 |
| 5 | Urea formaldehyde resin (50%) | 4000 | 7200 |
| 6 | Urea formaldehyde resin (65%) | 120 | 2400 |
| 7 | Phenol para formaldehyde liquid resin (80%) | - | 3000 |
| 8 | Phenol para formaldehyde liquid resin (76%) | - | 3000 |
| | **Total** | 6218 | 27900 |

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ರಡಿಯಲ್ಲಿ ದಿನಾಂಕ 14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಂದಾಜು ಅಧ್ಯಯನದ ಅಧಿಸೂಚನೆ ತಿದ್ದುಪಡಿ ದಿನಾಂಕ 01.12.2009 ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಯನ್ನು ಪ್ರಾರಂಭಿಸುವ ಮುನ್ನ ಪರಿಸರ ವಿಮೋಚನಾ ಪ್ರಮಾಣ ಪತ್ರವನ್ನು ಪಡೆಯಬೇಕಾಗಿರುತ್ತದೆ. ಅದರಂತೆ, ಈ ಯೋಜನೆಯನ್ನು ಪರಿಸರ ಆಘಾತ ಅಂದಾಜು ಅಧ್ಯಯನ ಅಧಿಸೂಚನೆ ಷೆಡ್ಯೂಲ್-1. ಕ್ರಮ ಸಂಖ್ಯೆ : 5ಎಫ್ ನಲ್ಲಿ ಪ್ರವರ್ಗ-ಬಿ1 ಗೆ ವರ್ಗೀಕರಿಸಿದ್ದು, ಈ ಯೋಜನೆಗೆ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿದ್ದು, ಈ ನಿಟ್ಟಿನಲ್ಲಿ, ಯೋಜನಾ ಪ್ರವರ್ತಕರು ಸದರಿ ಪ್ರಾಧಿಕಾರಕ್ಕೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಾಧೀಕಾರದಿಂದ ಈ ಯೋಜನೆಯ ಅರ್ಜಿಯನ್ನು ಪರಿಶೀಲಿಸಿ ದಿನಾಂಕ 05-07-2018 ರಂದು ಷರತ್ತುಬದ್ಧ ನಿಬಂಧನೆ (Terms of Reference) ಗಳನ್ನು ನೀಡಿ, ತ್ವರಿತ ಪರಿಸರ ಆಘಾತ ಅಂದಾಜು ಅಧ್ಯಯನ ವರದಿಯನ್ನು ತಯಾರಿಸಿ ಯೋಜನಾ ಕಾರ್ಯಕಾರಿ ಸಾರಂಶಗಳ ವಿವರಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕೈಗೊಳ್ಳಲು ಸಲ್ಲಿಸಲು ತಿಳಿಯಪಡಿಸಲಾಗಿರುತ್ತದೆ.

ಅದರಂತೆ, ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ವಯ ಮೆ. ಸಂರಕ್ಷಣ, ಬೆಂಗಳೂರು ಇವರು ತಯಾರಿಸಿದ ತ್ವರಿತ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಹಾಗೂ ಇದರ ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಗೆ ದಿನಾಂಕ 26.09.2019 ರಂದು ಮನವಿಯನ್ನು ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಮಂಡ್ಯ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 16-10-2019ರ ಕೋರಲಾಗಿರುತ್ತದೆ. ಆ ಮೇರೆಗೆ ಜಿಲ್ಲಾಧಿಕಾರಿಗಳು ದಿನಾಂಕ 22-01-2020 ರಂದು ಪೂರ್ವಾಹ್ನ 11.00 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಪ್ರಜಾವಾಣಿ (ಕನ್ನಡ) ಹಾಗೂ ದಿ. ಹಿಂದೂ (ಆಂಗ್ಲ) ಗಳಲ್ಲಿ ದಿನಾಂಕ 22-12-2019 ರಂದು ಪತ್ರಿಕಾ ಪ್ರಕಟಣೆ ನೀಡಿ ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿರುತ್ತದೆ. ಮುಂದುವರೆದು, ಮಂಡ್ಯ ಜಿಲ್ಲೆಯ ಪ್ರಮುಖ ಸ್ಥಳೀಯ ದಿನಪತ್ರಿಕೆಯಾದ ಆಂದೋಲನದಲ್ಲಿಯೂ ಸಹಾ ದಿನಾಂಕ 22-01-2020 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಮಂಡ್ಯ ಜಿಲ್ಲೆ, ಮಂಡ್ಯ
- ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ
- ಗ್ರಾಮ ಪಂಚಾಯತಿ ಕಾರ್ಯಾಲಯ, ತೂಬಿನಕೆರೆ, ಮಂಡ್ಯ
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಂಡ್ಯ ಜಿಲ್ಲೆ, ಮಂಡ್ಯ.
- ಅರಣ್ಯ ಮತ್ತು ಪರಿಸರ ಮಂತ್ರಾಲಯ, ದಕ್ಷಿಣ ವಲಯ, ಕೋರಮಂಗಲ, ಬೆಂಗಳೂರು.
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ಉದ್ದಿಮೆಯ ಸ್ಥಾಪನೆ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕರ ಪತ್ರಗಳನ್ನು ಹಂಚಲಾಗಿದ್ದು, ಧ್ವನಿವರ್ಧಕಗಳ ಮೂಲಕವು ಸಹ ಪ್ರಚಾರವನ್ನು ದಿನಾಂಕ 21-01-2020 ರಂದು ಮಾಡಲಾಗಿರುತ್ತದೆ.

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 22-01-2020 ರಂದು ಪೂರ್ವಾಹ್ನ 11:00 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿರುತ್ತದೆ.

ಸದಸ್ಯ ಸಮಾವೇಷಕರು ಹಾಗೂ ಪರಿಸರ ಅಧಿಕಾರಿಗಳಾದ ಶ್ರೀಮತಿ ಕೆ.ಎಲ್. ಸವಿತ ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿ, ಜಿಲ್ಲಾಧಿಕಾರಿಗಳನ್ನು ಸಭೆ ನಡೆಸಿಕೊಡುವಂತೆ ಕೋರಿದರು.

ಆನಂತರ, ಪರಿಸರ ಅಧಿಕಾರಿಗಳಾದ ಶ್ರೀಮತಿ ಕೆ.ಎಲ್. ಸವಿತ ರವರು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ, 1986ರಡಿಯಲ್ಲಿ ದಿನಾಂಕ 14-09-2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಂದಾಜು ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು.

ಮುಂದುವರೆದಂತೆ, ಸದರಿ ಯೋಜನೆಯ ಬಗ್ಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರಿಗೆ ಯೋಜನೆಯ ಬಗ್ಗೆ ವಿವರವನ್ನು ಮಂಡಿಸುವಂತೆ ಯೋಜನಾ ಪ್ರವರ್ತಕರಿಗೆ ಸಭೆಯ ಅಧ್ಯಕ್ಷರು ಸೂಚಿಸಿದರು.

ಅದರಂತೆ, ಮೆ. ಏಷ್ಯನ್ ಪಾಲಿಮರ್ಸ್ ಪರವಾಗಿ ಶ್ರೀ ಲಿಂಗರಾಜು ಹಾಗೂ ಕು. ಲಾಸ್ಯ, ಪ್ರತಿನಿದಿಗಳು, ಮೆ. ಸಂರಕ್ಷಣ, ಬೆಂಗಳೂರು ಇವರು ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ತ್ವರಿತ ಪರಿಸರ ಆಘಾತ ಅಂದಾಜು ಅಧ್ಯಯನ ವರದಿಯ ಕಾರ್ಯಕಾರಿ ಸಾರಾಂಶಗಳಾದ ಯೋಜನೆ ಪ್ರಸ್ಥಾವನೆ, ಸರ್ಕಾರದ ಮಂಜೂರಾತಿಗಳು, ಸ್ಥಳೀಯ ನಕ್ಷೆ, ಅಧ್ಯಯನ ಕ್ಷೇತ್ರದ ನಕ್ಷೆಗಳು, ಭೂ ಬಳಕೆಯ ವಿವರಗಳು, ಸ್ಥಳದ ಪ್ರಮುಖ ಲಕ್ಷಣಗಳು, ಮೂಲಭೂತ ಬೇಡಿಕೆಗಳು ಮತ್ತು ಸೌಕರ್ಯಗಳು, ಪರಿಸರದ ಅಂಶಗಳಾದ ವಾಯು, ಜಲ, ಶಬ್ದ, ಭೂ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಪರಿಸರ ನಿರ್ವಹಣ ಯೋಜನೆ, ಪರಿಸರ ಸಂರಕ್ಷಣಾ ಕಾರ್ಯಗಳ ಆಯವ್ಯಯ ಒಟ್ಟು ಪರಿಸರ ನಿರ್ವಹಣಾ ಯೋಜನೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು.

ಸದಸ್ಯ ಸಮಾವೇಷಕರು ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇ ಆಕ್ಷೇಪಣೆ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆ ಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಆಕ್ಷೇಪಣೆ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ಉಮೇಶ್, ತೂಬಿನಕೆರೆ, ಮಂಡ್ಯ ತಾಲ್ಲೂಕು:** ಮೆ. ಏಷ್ಯನ್ ಪಾಲಿಮರ್ಸ್ ಕೈಗಾರಿಕೆಯು ಈ ಭಾಗದಲ್ಲಿ ಒಂದು ಉತ್ತಮವಾದ ಕೈಗಾರಿಕೆಯಾಗಿದ್ದು, ಕೈಗಾರಿಕೆಯ ಒಳಆವರಣವು ತುಂಬಾ ಒಳ್ಳೆಯ ಪರಿಸರವನ್ನು ಹೊಂದಿರುತ್ತದೆ. ಸದರಿ ಕೈಗಾರಿಕೆಯು ಹಲವು ವರ್ಷಗಳಿಂದ ಪರಿಸರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯಚರಿಸುತ್ತಿದ್ದು, ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಯೋಜನೆಯಿಂದ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಸಭೆಗೆ ತಿಳಿಸಿದರು.

2. **ಶ್ರೀ. ಕುಳ್ಳೇಗೌಡ, ಕಾಳೇನಹಳ್ಳಿ ಗ್ರಾಮ, ಮಂಡ್ಯ ತಾಲ್ಲೂಕು:** ಸದರಿ ಕೈಗಾರಿಕೆಯು ಉತ್ತಮ ಪರಿಸರವನ್ನು ಕಾಪಾಡಿಕೊಂಡು, ಸ್ಥಳೀಯರಿಗೆ ಕೆಲಸ ನೀಡಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿದರು.

3. **ಶ್ರೀ. ಬಿ.ವಿ. ರೆಡ್ಡಿ, ಪರಿಸರ ಸಾಮಾಜಿಕ ಕಾರ್ಯಕರ್ತ:** ಸದರಿ ಕೈಗಾರಿಕೆಯು ಹಸಿರು ಪರಿಸರವನ್ನು ಹೊಂದಿದ್ದು, ಸಿ.ಎಸ್.ಆರ್. ಅಡಿಯಲ್ಲಿ ಹಣವನ್ನು ಸದುಪಯೋಗ ಮಾಡಿಕೊಳ್ಳುತ್ತಿರುವುದು ಕಂಡುಬಂದಿರುತ್ತದೆ. ಸದರಿ ಕೈಗಾರಿಕೆಯಿಂದ ಸುತ್ತಮುತ್ತಲು ಯಾವುದೇ ತೊಂದರೆಯಾಗುತ್ತಿಲ್ಲದಿರುವುದು ಕಂಡುಬಂದಿದ್ದು, ಈ ಉದ್ದೇಶಿತ ಯೋಜನೆಗೆ ತಮ್ಮ ಒಪ್ಪಿಗೆ ಇರುವುದಾಗಿ ತಿಳಿಸಿದರು.

4. **ಶ್ರೀ. ಸುವರ್ಣನಂದ ರೆಡ್ಡಿ, ಪರಿಸರ ಸಮಾಜಿಕ ಕಾರ್ಯಕರ್ತ:** ನಾನು ಪರಿಸರವಾದಿಯಾಗಿದ್ದು, ಯೋಜನೆಗೆ ಸಹಕಾರ ನೀಡುವುದಾಗಿ ತಿಳಿಸಿದರು. ಕಾರ್ಖಾನೆಯ ಆವರಣದಲ್ಲಿ ಮಳೆ ನೀರಿನ ಕೊಯ್ಲೂ ಅಳವಡಿಸಿಕೊಂಡಿದ್ದು, ಸುತ್ತಮುತ್ತಲಿನ ಕೊಳವೆಬಾವಿಗಳ ನೀರಿನ ಮಟ್ಟವನ್ನು ಹೆಚ್ಚಿಸಲು ಕ್ರಮಕೈಗೊಳ್ಳಲು ಸೂಚಿಸಿದರು ಹಾಗೂ ಹಣ್ಣು ಮತ್ತು ವೈದ್ಯಕೀಯ ಉಪಯೋಗದ ಗಿಡಮರಗಳನ್ನು ಹೆಚ್ಚಾಗಿ ಬೆಳೆಸಿ ಧೂಳಿನ ಪ್ರಮಾಣವನ್ನು ಕಡಿಮೆ ಮಾಡಲು ಸೂಚಿಸಿದರು. ಹಾಗೂ ಸುತ್ತಮುತ್ತಲಿನ ಪರಿಸರ ಸಮತೋಲನ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ 10 ಕಿ.ಮೀ. ವ್ಯಾಪ್ತಿಯಲ್ಲಿ ಆರೋಗ್ಯ, ಕೃಷಿ, ಅಂತರ್ಜಲ ಮುಂತಾದವುಗಳನ್ನು ಅಧ್ಯಯನ ನಡೆಸಿ ವರದಿಯನ್ನು ತಯಾರಿಸಿದಲ್ಲಿ ಮುಂದಿನ ಅನುಕೂಲವಾಗುವುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಉದ್ದಿಮೆಯಲ್ಲಿ ಸೂಕ್ತ ಜಲ, ವಾಯು, ಶಬ್ಧಮಾಲಿನ್ಯ ನಿಯಂತ್ರಣಗಳ ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಉದ್ದಿಮೆದಾರರು ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದರು ಹಾಗೂ ಸಿ.ಎಸ್.ಆರ್. ಅಡಿಯಲ್ಲಿ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳುವಂತೆ ತಿಳಿಸಿ ಯೋಜನೆಗೆ ತಮ್ಮ ಅನುಮತಿ ಇರುವುದಾಗಿ ತಿಳಿಸಿದರು.

5. **ಪ್ರೋ. ಟಿ. ಭೀಮಪ್ಪ, ಮೈಸೂರು ವಿಶ್ವವಿದ್ಯಾನಿಲಯ:** ಈ ಕೈಗಾರಿಕೆಯಿಂದ ತಮ್ಮ ವಿಶ್ವ ವಿದ್ಯಾನಿಲಯದ ಪಾಲಿಮರ್ ಸೈನ್ಸ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ತಿಳಿಸಲು ಅನುಕೂಲವಾಗುತ್ತಿರುತ್ತದೆ ಹಾಗೂ ಈ ಕೈಗಾರಿಕೆಯು ಕಾಲೇಜಿನ ಪ್ರಯೋಗಾಲಯಕ್ಕೆ ಉಪಕರಣಗಳನ್ನು ನೀಡಿ ಅನುಕೂಲ ಮಾಡಿಕೊಟ್ಟಿರುತ್ತಾರೆ. ಕೆಲವೊಂದು ಕಾಲೇಜು ವಿದ್ಯಾರ್ಥಿಗಳಿಗೆ ಉದ್ಯೋಗ ನೀಡಿದ್ದು, ಕೈಗಾರಿಕೆಯು ತಯಾರಿಸುತ್ತಿರುವ ಉತ್ಪನ್ನ ಕೃಷಿ ಆಧಾರಿತ ಉತ್ಪನ್ನಗಳಿಗೆ ಉಪಯೋಗಿಸುತ್ತಿದ್ದು, ಇದರಿಂದ ಯಾವುದೇ ರೀತಿಯ ತೊಂದರೆಗಳು ಇಲ್ಲವೆಂದು ತಿಳಿಸಿದರು.

6. **ಶ್ರೀ ಆಂಜನೇಯ ನಾಗೇನಹಳ್ಳಿ, ಅಧ್ಯಕ್ಷರು ಮತ್ತು ಸಂಸ್ಥಾಪಕರು, ಸಮಗ್ರ ಪರಿವರ್ತನ ಸಮುದಾಯ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ:** ಈ ಸಭೆಯಲ್ಲಿ ಯಾವುದೇ ವಿರೋದಗಳು ಕಂಡುಬರದಿರುವುದು ಕೈಗಾರಿಕೆಯು ಸುತ್ತಮುತ್ತಲಿನ ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುವುದು ತೋರಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ನೌಕರಿ ಪಡೆಯುವದು ಕಷ್ಟಕರವಾಗಿದ್ದು, ಇಂತಹ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಿದಲ್ಲಿ ನಿರುದ್ಯೋಗ ಸಮಸ್ಯೆಯನ್ನು ತಡೆಗಟ್ಟಬಹುದುದೆಂದು ತಿಳಿಸಿದರು. ಉತ್ತಮ ಪರಿಸರ ಕಾಪಾಡುವ ನಿಟ್ಟಿನಲ್ಲಿ ಹೆಚ್ಚಿನ ಗಿಡಮರಗಳನ್ನು ನೆಟ್ಟು ಬೆಳಸಬೇಕೆಂದು ತಿಳಿಸಿ, ಉದ್ದೇಶಿತ ಯೋಜನೆಗೆ ತಮ್ಮ ಹಾಗೂ ತಮ್ಮ ಸಂಸ್ಥೆಯ ಸಂಪೂರ್ಣ ಬೆಂಬಲವಿರುವುದಾಗಿ ತಿಳಿಸಿದರು.

7. **ಪ್ರೋ. ವಿಜಯ ಶೇಷದ್ರಿ, ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ:** ಸದರಿ ಕೈಗಾರಿಕೆಯು ಎಂ.ಎಸ್ಸಿ. ಪಾಲಿಮರ್ ಸೈನ್ಸ್ ವಿದ್ಯಾರ್ಥಿಗಳ ಸಂಶೋದನಾ ಚಟುವಟಿಕೆಗಳಿಗೆ ಪ್ರೋತ್ಸಾಹದಾಯಕವಾಗಿದ್ದು, ಇದೇ ರೀತಿಯ ಪ್ರೋತ್ಸಾಹವನ್ನು ಮುಂದುವರೆಸುವಂತೆ ಉದ್ದಿಮೆದಾರರಲ್ಲಿ ಕೋರುವುದಾಗಿ ತಿಳಿಸಿ, ಉದ್ದೇಶಿತ ಯೋಜನೆಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

ಈ ಸಭೆಯಲ್ಲಿ ನೆರೆದಿದ್ದ ಈ ಕೆಳಗಿನವರುಗಳು ಲಿಖಿತ ಮನವಿಯನ್ನು ಅಧ್ಯಕ್ಷರಿಗೆ ಸಲ್ಲಿಸಿದರು. ಸದರಿ ಮನವಿಯನ್ನು **ಅನುಬಂಧ–3** ರಲ್ಲಿ ಲಗತ್ತಿಸಲಾಗಿದೆ.

1. ಶ್ರೀ. ಎಸ್. ವೆಂಕಟೇಶ್ವರಲು, ಮೆ. ನೇತಾ ಸ್ವಚ್ಛಂದ ಸೇವ ಸೊಸೈಟಿ, ಕರ್ನೂಲ್, ಆಂದ್ರಪ್ರದೇಶ.
2. ಶ್ರೀ ಬಿ. ವಿ. ರೆಡ್ಡಿ, ಅಧ್ಯಕ್ಷರು, ಮೆ. ಶಕ್ತಿ ಎನ್‌ವಿರಾನ್ ಮೆಂಟ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಬಳ್ಳಾರಿ.
3. ಶ್ರೀ ಆಂಜನೇಯ ನಾಗೇನಹಳ್ಳಿ, ಅಧ್ಯಕ್ಷರು ಮತ್ತು ಸಂಸ್ಥಾಪಕರು, ಸಮಗ್ರ ಪರಿವರ್ತನ ಸಮುದಾಯ, ಹಾವೇರಿ ಜಿಲ್ಲೆ.
4. ಶ್ರೀ. ರಂಗರಾವ್ ಕೊತಕೊಂಡ, ಮೆ. ಎನ್‌ವಿರಾನ್‌ಮೆಂಟ್ ಪಾಲ್ಯೂಷನ್ ಕಂಟ್ರೋಲ್ ಸೊಸೈಟಿ, ಹೈದರಾಬಾದ್, ತೆಲಂಗಾಣ.
5. ಶ್ರೀ ಕೆ. ಅಶೋಕ್, ಮೇಟ್ರೋ ಅರ್ಬನ್ & ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಹೈದರಾಬಾದ್, ತೆಲಂಗಾಣ.
6. ಶ್ರೀಮತಿ ಮಂಜುಳ, ಜಿ.ಕೆ. ಎಜುಕೇಶನ್ ಅಂಡ್ ರೂರಲ್ ಅರ್ಬನ್ ಡೆವಲಪ್‌ಮೆಂಟ್ ಸೊಸೈಟಿ(ರಿ), ಚಿತ್ರದುರ್ಗ.

ತದನಂತರ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು, ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ ಸಮಿತಿ, ಮಂಡ್ಯ ರವರು ಸಭೆಯನ್ನು ಉದ್ದೇಶಿಸಿ ಕೈಗಾರಿಕೆಗಳ ಅಭಿವೃದ್ಧಿ ಸಮಾಜದ ಅಭಿವೃದ್ದಿಗೂ ಪೂರಕವಾಗಿರಬೇಕು. ಯಾವುದೇ ಕೈಗಾರಿಕೆಯು ಪರಿಸರದ ಮೇಲೆ ಅಂದರೆ ವಾಯು/ಜಲ/ಭೂಮಿ ಅಥವಾ ಸುತ್ತಮುತ್ತಲಿನ ಪ್ರಾಣಿಪಕ್ಷಿಗಳು ಮೇಲೆ ಯಾವುದೇ ದುಷ್ಪರಿಣಾಮ ಬೀರದಂತೆ ಅಭಿವೃದ್ದಿಯಾಗಬೇಕು. ಈಗಾಗಲೇ ಮೆ. ಏಷ್ಯನ್ ಪಾಲಿಮರ್ಸ್ ಪರವಾಗಿ ಕನ್ಸಲ್‌ಟೆಂಟ್‌ರವರು ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಅಳವಡಿಸಿಕೊಂಡಿರುವ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ವಿಸ್ತೃತವಾಗಿ ವಿವರಿಸಿರುತ್ತಾರೆ. ಕೈಗಾರಿಕೆಗಳು / ಕೈಗಾರಿಕೋದ್ಯಮಿಗಳು ಬಂದಂತ ಲಾಭಂಶದಲ್ಲಿ ಸಮಾಜದ ಅಬಿವೃದ್ಧಿಗೆ ಬಳಸುವಂತಹ ಗುರುತರ ಜವಾದ್ದಾರಿಯನ್ನು ಹೊಂದಿರುತ್ತದೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕೆಂದು ತಿಳಿಸಿದರು. ಕಾವೇರಿ ನದಿ ಹಾಗೂ ಸೂಕ್ಷ್ಮ ಪರಿಸರ ಹೊಂದಿರುವ ಪ್ರದೇಶವಾಗಿದ್ದು, ಕೈಗಾರಿಕೆಯು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ಲಕ್ಷ ಸಸಿಗಳನ್ನು ಮುಂದಿನ 2 ವರ್ಷಗಳಲ್ಲಿ ನೆಟ್ಟು ಬೆಳೆಸಬೇಕೆಂದು ಹಾಗೂ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಲ್ಲಿ ಕಲಿಕಾ ಸಾಮಾರ್ಥ್ಯವನ್ನು ಹೆಚ್ಚಿಸಲು ಸ್ಮಾರ್ಟ್‌ಕ್ಲಾಸ್‌ಗಳನ್ನು ಅಳವಡಿಸಲು ಅನುವುಮಾಡಿಕೊಡಬೇಕೆಂದು ಹಾಗೂ ಸುತ್ತಮುತ್ತಲಿನ ಸಾರ್ವಜನಿಕರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಲು ಸ್ವಚ್ಛತಾ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಬೇಕೆಂದು ಎಂದು ಸೂಚಸಿದರು. ಮೌಖಿಕವಾಗಿ ತಿಳಿಸಿದ ಹಾಗು ಲಿಖಿತವಾಗಿ ಸಲ್ಲಿಸಿದ ಆಕ್ಷೇಪಣೆ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಯತವತ್ತಾಗಿ ನಡವಳಿಯಲ್ಲಿ ದಾಖಲಿಸಿ ಛಾಯಾಚಿತ್ರ ಹಾಗು ವಿಡಿಯೋ ದಾಖಲಾತಿಗಳೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೂಲಕ ರಾಜ್ಯ ಮಟ್ಟದ

ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದೆಂದು ತಿಳಿಸಿದರು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಡಾ. ಎಂ. ವಿ ವೆಂಕಟೇಶ್)
**ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು**
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ ಸಮಿತಿ,
ಮಂಡ್ಯ ಜಿಲ್ಲೆ, ಮಂಡ್ಯ

ಇವರಿಗೆ:

**ಸದಸ್ಯ ಕಾರ್ಯದರ್ಶಿಗಳು,**
**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,**
**ಬೆಂಗಳೂರು**